### ಆಪ್ ಭಿನ್ನಮತ ಕುರಿತು ಸ್ವರಾಜ್ ಸಂವಾದ್ ಸಂಘಟನೆಯ ರೂವಾರಿ ಯೋಗೇಂದ್ರ ಯಾದವ್ ಪ್ರತಿಕ್ರಿಯೆ

# ಕೇಜ್ರಿ ಬಗ್ಗೆ ವೈರತ್ವವಿಲ್ಲ, ಮಾರ್ಗದರ್ಶನ ನೀಡಲು ಸಿದ್ಧ

■ **ಶಶಿಧರ್ ನಂದಿಕಲ್** ಬೆಂಗಳೂರು

''ಅರವಿಂದ್ ಕೇಜ್ರಿವಾಲ್ ಸೇರಿದಂತೆ ಆಮ್ ಆದ್ಮಿ ಪಕ್ಷದವರು ನಮಗೆ ವೈರಿಗಳಲ್ಲ. ಅವರು ನಮ್ಮ ಮಾರ್ಗದರ್ಶನ, ಸಲಹೆ ಬಯಸಿದರೆ ಕೊಡಲು ಈಗಲೂ ಸಿದ್ಧ,'' ಎಂದು ಸ್ವರಾಜ್ ಸಂವಾದ್ ಸಂಘಟನೆಯ ರೂವಾರಿ ಯೋಗೇಂದ್ರ ಯಾದವ್ ಹೇಳಿದ್ದಾರೆ.

''ಆಪ್ ಮುಖಂಡರು, ಅರವಿಂದ್ ಹಾಗೂ ನಮ್ಮ ನಡುವೆ ವೈಯಕ್ತಿಕ ಭಿನ್ನಾಭಿಪ್ರಾಯ ಹಿಂದೆಯೂ ಇರಲಿಲ್ಲ ಈಗಲೂ ಇಲ್ಲ. ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ನಾನು ಮತ್ತು ಪ್ರಶಾಂತ್ ಭೂಷಣ್ ಆಪ್‌ನ ನಿಲುವು ವಿರೋಧಿಸಿದ್ದೇವೆ. ನಾವು ನಕಾರಾತ್ಮಕ ದೃಷ್ಟಿಕೋನ ಹೊಂದಿಲ್ಲ. ಸಕಾರಾತ್ಮಕ ನೆಲೆಯಲ್ಲಿ ಮಾತುಕತೆಗೆ ತಯಾರಿದ್ದೇವೆ. ಆದರೆ, ಅವರ ಆಲೋಚನೆಗಳಿಗೆ ಅನುಗುಣವಾಗಿ ನಡೆದುಕೊಳ್ಳಲು ಸಾಧ್ಯವಾಗುವುದಿಲ್ಲ,'' ಎಂದು ಅವರು 'ವಿಕ' ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ.

**ಪ್ರಶ್ನೆ: ಆಪ್ ಪ್ರಮುಖರಾದ ನೀವು, ಪ್ರಶಾಂತ್ ಭೂಷಣ್ ಮತ್ತು ಅರವಿಂದ ಕೇಜ್ರಿವಾಲ್ ನಡುವೆ ಇತ್ಯರ್ಥ ಪಡಿಸಿಕೊಳ್ಳಲು ಆಗದಷ್ಟು ವೈಮನಸ್ಯ ಉಂಟಾದದ್ದು ಹೇಗೆ?**

**ಯಾದವ್:** ಅರವಿಂದ್‌ಗೆ ಈಗಲೂ ನಮ್ಮ ಶುಭ ಕಾಮನೆಯಿದೆ. ದಿಲ್ಲಿ ಜನತೆಗೆ ಅಪೇಕ್ಷೆಯಂತೆ ಅವರು ಉತ್ತಮ ಆಡಳಿತ ನೀಡಲಿ ಎನ್ನುವುದು ನಮ್ಮ ಸದಾಶಯ. ನಾವು ಯಾವತ್ತೂ ಅರವಿಂದ್ ವಿರುದ್ಧ ವೈಯಕ್ತಿಕ ದೋಷಾರೋಪಣೆ ಮಾಡಿಲ್ಲ. ನಾವೇ ರಚಿಸಿಕೊಂಡ ನೀತಿ, ಸಿದ್ಧಾಂತದ ಅನ್ವಯ ಆಮ್ ಆದ್ಮಿ ಪಕ್ಷವನ್ನು ನಡೆಸಿಕೊಂಡು ಹೋಗಬೇಕೆನ್ನುವುದು ನಮ್ಮ ಪ್ರತಿಪಾದನೆಯಾಗಿತ್ತು. ಈ ಬಗ್ಗೆ ಅರವಿಂದ್ ಅವರೊಂದಿಗೆ ದೀರ್ಘ ಚರ್ಚೆಗೂ ತಯಾರಿದ್ದೆವು. ಆದರೆ, ದಿಲ್ಲಿ ಚುನಾವಣೆ ನಂತರದ ವಿದ್ಯಮಾನ ಅದಕ್ಕೆ ಅವಕಾಶ ಕೊಡಲಿಲ್ಲ. ಕೇಜ್ರಿವಾಲ್ ಸುತ್ತಮುತ್ತ ಇರುವವರು ಒಂದು ನಿರ್ಣಯ ಪಾಸು ಮಾಡಿದರು. ಪಕ್ಷದಲ್ಲಿ ಒಂದೋ ಕೇಜ್ರೀವಾಲ್ ಇರಬೇಕು ಅಥವಾ ಯಾದವ್, ಭೂಷಣ್ ಇರಬೇಕು ಎನ್ನುವಂತಹ ವಾತಾವರಣ ಸೃಷ್ಟಿಸಲಾಯಿತು. ನಾವು ಮಾತ್ರ ಇಂಥ ಮಾತುಗಳನ್ನು ಎಲ್ಲಿಯೂ ಆಡಿಲ್ಲ.

**ಪ್ರಶ್ನೆ: ಹಾಗಿದ್ದರೆ ಆಪ್‌ನಿಂದ ಹೊರಬಂದಿರುವ ನೀವು ಅದಕ್ಕೆ ಪರ್ಯಾಯವಾದ ಹೊಸ ರಾಜಕೀಯ ಸಂಘಟನೆ ಹುಟ್ಟು ಹಾಕುತ್ತೀರಾ?**

**ಯಾದವ್:** ನಾವು ಈಗಾಗಲೇ ಸ್ವರಾಜ್ ಸಂವಾದ್ ಪ್ರಾರಂಭಿಸಿದ್ದೇವೆ. ಈ ಸಂವಾದಕ್ಕೆ ಏಪ್ರಿಲ್ 14ರಂದು ಗುರಗಾಂವ್‌ನಲ್ಲಿ ಚಾಲನೆ ನೀಡಲಾಗಿದೆ. ಇದು ರಾಜಕೀಯದಿಂದ ಹೊರತಾದ ಸಂಘಟನೆಯಾಗಿದ್ದು, ಯಾರು ಬೇಕಾದರೂ ಭಾಗಿಯಾಗಬಹುದು. ದಿಲ್ಲಿಯಲ್ಲಿ ಆಮ್ ಆದ್ಮಿ ಪಕ್ಷದ ಸರಕಾರವಿದೆ. ಅದು ವ್ಯರ್ಥವಾಗಬಾರದು, ಉತ್ತಮ ಕೆಲಸ ಮಾಡಲಿ. ಒಳ್ಳೆಯ ಆಡಳಿತ ನೀಡುವ ಅವಕಾಶವೂ ಅವರಿಗೆ ಸಿಗಲಿ.

**ಪ್ರಶ್ನೆ: ಆಪ್ ಬಗ್ಗೆ ಈಗಲೂ ಇಷ್ಟೊಂದು ಮೃದು ಧೋರಣೆ ತಳೆದಿರುವ ನೀವು ಆ ಪಕ್ಷದೊಂದಿಗೆ ಮರು ಬಾಂಧವ್ಯ ಬೆಸೆಯುವ ಆಕಾಂಕ್ಷೆ ಹೊಂದಿದ್ದೀರಾ?**

**ಯಾದವ್:** ಟೀಕೆ, ಟಿಪ್ಪಣಿಗಳು ಸಹಜ. ಆದರೆ, ಅದು ವೈಯಕ್ತಿಕ ನೆಲೆಗೆ ಇಳಿಯಬಾರದು. ಅರವಿಂದ್ ಅಥವಾ ಆಪ್‌ನವರು ನಮ್ಮ ಮಾರ್ಗದರ್ಶನ, ಸಲಹೆಯನ್ನು ಬಯಿಸಿದರೆ ನೀಡಲು ನಾವು ಸದಾ ಸಿದ್ಧರಿದ್ದೇವೆ. ಅವರ ಆಲೋಚನೆಗೆ ತಕ್ಕಂತೆ ನಮ್ಮ ಸಮಯ ಕೊಡಲು ಆಗುವುದಿಲ್ಲ. ಸಕಾರಾತ್ಮಕ ಚರ್ಚೆ, ಸಂವಾದ ನಡೆಯುವುದಾದರೆ ಉತ್ತಮ.

**ಪ್ರಶ್ನೆ: ಒಂದು ವೇಳೆ ಆಮ್ ಆದ್ಮಿ ನಿಮ್ಮ ಮಾರ್ಗದರ್ಶನಕ್ಕೆ ಮರು ಆಹ್ವಾನವಿತ್ತರೆ ಹೊಸ ರಾಜಕೀಯ ಪಕ್ಷ ಅಥವಾ ಸಂಘಟನೆಗೆ ರೂಪ ಕೊಡುವ ನಿರ್ಧಾರದಿಂದ ಹಿಂದೆ ಸರಿಯುತ್ತೀರಾ ?**

**ಯಾದವ್:** ರಾಜಕೀಯ ಪಕ್ಷ ಹುಟ್ಟು ಹಾಕುವ ಉದ್ದೇಶ ನಮ್ಮದಲ್ಲ. ನಾವು ಸ್ವರಾಜ್ ಅಭಿಯಾನದತ್ತ ಗಮನ ಹರಿಸಿದ್ದೇವೆ. ವಾಸ್ತವ ನೆಲೆಯಲ್ಲಿ ರಾಜನೀತಿ ಬಿಂಬಿಸುವ ಹಾಗೂ ಲೋಕತಂತ್ರದ ಆಶಯದ ಅನುಸಾರ ಅದಕ್ಕೊಂದು ಹೊಸ ಮಾದರಿ ಪರಿಷ್ಕರಿಸುವ ಪ್ರಯತ್ನ ಇದಾಗಲಿದೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಹಂತದ ತಿರುಗಾಟ ಆರಂಭವಾಗಿದ್ದು, ನಂತರ ದೇಶಾದ್ಯಂತ ಯಾತ್ರೆ ಕೈಗೊಳ್ಳಲಾಗುವುದು.

**ಪ್ರಶ್ನೆ: ಸ್ವರಾಜ್ ಸಂವಾದದ ಧ್ಯೇಯೋದ್ದೇಶ, ಮುನ್ನೋಟಗಳೇನು?**

**ಯಾದವ್:** ಮೊದಲ ಹಂತದಲ್ಲಿ ದೇಶದ ಜನತೆಯ ಭಾವನೆ ಮತ್ತು ಅವರ ಆಶೋತ್ತರಗಳ ಬಗ್ಗೆ ತಿಳಿದುಕೊಳ್ಳುವ ಯತ್ನವಾಗಲಿದೆ. ಯುವಕರನ್ನು ಒಳಗೊಂಡಂತೆ ನಾನಾ ವರ್ಗ, ಸ್ತರದ ಜನರ ಅಗತ್ಯತೆ ಬಗ್ಗೆ ಸಂವಾದ ನಡೆಸಲಾಗುತ್ತದೆ. ಎರಡನೇ ಹಂತದಲ್ಲಿ ದೇಶಾದ್ಯಂತ ಸ್ವರಾಜ್ ಕೇಂದ್ರ ತೆರೆದು ಸ್ಥಳೀಯ ಸಮಸ್ಯೆಗಳ ಬಗ್ಗೆ ಚಿಂತನ-ಮಂಥನ ನಡೆಸಿ ಪರಿಹಾರ ಮಾರ್ಗ ಹುಡುಕುವ ಪ್ರಯತ್ನವಾಗಲಿದೆ. ಮೂರನೇ ಹಂತದಲ್ಲಿ ರಾಷ್ಟ್ರದ ವಿಚಾರವಾದಿಗಳು, ಬುದ್ಧಿಜೀವಿಗಳು, ನಾನಾ ಕ್ಷೇತ್ರದ ತಜ್ಞರೊಂದಿಗೆ ಕಲೆತು ಸಮಾಲೋಚಿಸಿ ದೇಶದ ಭವಿಷ್ಯದ ಕಾರ್ಯಸೂಚಿ ಸಿದ್ಧಪಡಿಸಲಾಗುವುದು. ನಾಲ್ಕನೇ ಹಂತದಲ್ಲಿ ಸ್ವರಾಜ್ ಯಾತ್ರೆ ಆರಂಭವಾಗಲಿದೆ.

**ಪ್ರಶ್ನೆ : ಎನ್‌ಡಿಎ ಸರಕಾರದ ಭೂಸ್ವಾಧೀನ ಕಾಯಿದೆ ಬಗ್ಗೆ ಸ್ವರಾಜ್ ನಿಲುವೇನು?**

**ಯಾದವ್:** ಭೂಸ್ವಾಧೀನ ಕಾಯಿದೆ ವಿಚಾರದಲ್ಲಿ ಬಿಜೆಪಿ ದೊಡ್ಡ ಮೋಸ ಮಾಡಿದೆ. 120 ವರ್ಷಗಳ ಬಳಿಕ ರೈತರಿಗೆ ನ್ಯಾಯ ಸಿಗುವ ಅವಕಾಶವನ್ನು ಕಿತ್ತುಕೊಳ್ಳಲು ಹೊರಟಿದೆ. ಭೂಸ್ವಾಧೀನ ಸಂಬಂಧ 2013ರಲ್ಲಿ ತರಲಾದ ಕಾಯಿದೆ ಉತ್ತಮವಾಗಿತ್ತು. ಅದು ಕಾಂಗ್ರೆಸ್‌ನ ಕಾನೂನು ಆಗಿರಲಿಲ್ಲ. ಬದಲಾಗಿ ಇಡೀ ಸಂಸತ್ತು ಅಂಗೀಕರಿಸಿದ ವಿಧೇಯಕವಾಗಿತ್ತು. ಅದನ್ನು ಒಂದೇ ಹೊಡೆತಕ್ಕೆ ಹಾಳು ಮಾಡಲು ಬಿಜೆಪಿ ಮುಂದಾಗಿದೆ. ಈ ಬಗ್ಗೆಯೂ ನಮ್ಮ ಸಂವಾದದಲ್ಲಿ ಪ್ರಸ್ತಾಪಿಸಲಿದ್ದೇವೆ.

---

## ವಿಕ ಸಂದರ್ಶನ



**ಪ್ರಶ್ನೆ: ಆಪ್ ರ್‍ಯಾಲಿಯಲ್ಲಿ ಗಜೇಂದ್ರ ಸಿಂಗ್ ಆತ್ಮಹತ್ಯೆ ದುರ್ಘಟನೆ ಕುರಿತಂತೆ ನೀವು ಏನು ಹೇಳುತ್ತೀರಿ?**

**ಯಾದವ್:** ಇದೊಂದು ದೌರ್ಭಾಗ್ಯ. ಗಜೇಂದ್ರ ಸಿಂಗ್ ಆತ್ಮಹತ್ಯೆಗೆ ಮುನ್ನ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣವೇನು ಎನ್ನುವುದನ್ನು ಶೋಧಿಸಬೇಕು. ಕೃಷಿಕರ್‍ಯಾರೂ ತಮ್ಮ ಮಕ್ಕಳನ್ನು ಕೃಷಿ ಕೆಲಸಕ್ಕೆ ಹಚ್ಚುತ್ತಿಲ್ಲ. ಕೃಷಿ ಬೆಳೆಗಳಿಗೆ ಉತ್ತಮ ದರ ನಿಗದಿಯಾಗಿದ್ದರೆ, ರೈತರಿಗೆ ಒಳ್ಳೆಯ ಆದಾಯ ಬಂದಿದ್ದರೆ ಪರಿಸ್ಥಿತಿ ಹೀಗಾಗುತ್ತಿರಲಿಲ್ಲ. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಅತ್ಯಂತ ಕಡಿಮೆಯಾದದ್ದೂ ಇದಕ್ಕೆ ಕಾರಣ. ಶೇ.50ರಷ್ಟು ಎಂಎಸ್‌ಪಿ ನೀಡುವುದಾಗಿ ಬಿಜೆಪಿ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿತ್ತು . ಆದರೆ, ಅಷ್ಟೊಂದು ದರ ನೀಡಲು ಸಾಧ್ಯವಿಲ್ಲವೆಂದು ಕಳೆದ ಫೆಬ್ರವರಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರಕಾರ ಅಫಿಡವಿಟ್ ಸಲ್ಲಿಸಿದೆ.

**ಪ್ರಶ್ನೆ: ಸರ್ವೋದಯ ಕರ್ನಾಟಕ , ರೈತ ಸಂಘ, ದಲಿತ ಪರ ಸಂಘಟನೆಗಳು ಸೇರಿದಂತೆ ಕರ್ನಾಟಕದ ಸಮಾನ ಮನಸ್ಕ ಸಂಘಟನೆಗಳು ಆಪ್ ನೇತೃತ್ವದಲ್ಲಿ ಒಂದುಗೂಡಿ ಹೋರಾಡುವ ಅಪೇಕ್ಷೆಯಲ್ಲಿದ್ದವು. ಆಪ್ ಬಿರುಕಿನಿಂದ ಈ ಸಂಘಟನೆಗಳಿಗೆ ನಿರಾಶೆ ಮಾಡಿದಂತಾಗಲಿಲ್ಲವೇ?**

**ಯಾದವ್:** ಖಂಡಿತ ಇಲ್ಲ. ನಮ್ಮ ಹಿಂದಿನವರಿಗೆ (ಆಪ್) ನಷ್ಟವುಂಟು ಮಾಡುವುದು ನಮ್ಮ ಉದ್ದೇಶವಲ್ಲ. ನಾನು ಈಗಾಗಲೇ ಸ್ಪಷ್ಟಪಡಿಸಿದಂತೆ ಎಲ್ಲರೊಂದಿಗೂ ಮಾತುಕತೆಗೆ ತಯಾರಿದ್ದೇವೆ. ಅವರು (ಆಪ್) ನಮ್ಮ ವೈರಿಗಳಲ್ಲ. ಅವರನ್ನು ಸ್ನೇಹಿತರೆಂದು ಭಾವಿಸಿದ್ದೇವೆ. ಸ್ವರಾಜ್ ಸಂವಾದಕ್ಕೆ ಅವರೂ ಬರಬಹುದು. ಕರ್ನಾಟಕದಲ್ಲಿ ಸರ್ವೋದಯ, ರೈತ ಸಂಘ, ದಲಿತ ಸಂಘಟನೆಗಳು ಒಗ್ಗೂಡುವುದು ಒಳ್ಳೆಯ ಪ್ರಯೋಗ. ಈ ಸಂಘಟನೆಗಳಿಗೆ ಸ್ವರಾಜ್ ಬೆಂಬಲ ನೀಡಲಿದೆ. ದೇವನೂರು ಮಹಾದೇವ ಅವರಂತಹ ಚಿಂತಕರು ನಮ್ಮೊಂದಿಗೆ ಇರುವುದು ಹೆಮ್ಮೆಯ ವಿಚಾರ. ಅವರ ಮಾರ್ಗದರ್ಶನಕ್ಕೆ ಯಾವಾಗಲೂ ಸ್ವಾಗತವಿದೆ.